**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816/2021**

**ಪ್ರಾಸಾಃ- 25 ಚಾಸಾಃ- 5**

| | | |
|---|---|---|
| ಸಾಕ್ಷಿಯ ಹೆಸರು | : | ಹೊನ್ನೂರಪ್ಪ |
| ತಂದೆಯ ಹೆಸರು | : | ಮಲ್ಲಪ್ಪ |
| ವಯಸ್ಸು | : | 64 ವರ್ಷ |
| ವೃತ್ತಿ | : | ನಿವೃತ್ತ ನೌಕರ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 2.7.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 4 ಪರಿಚಯ. ನನಗೆ ಆರೋಪಿತರ ಪರಿಚಯ ಇದೆ. ದಿಃ 8-6-2021 ರಂದು ಮಹಿಳಾ ಪೋಲೀಸ್‌ಠಾಣೆ ಬಳ್ಳಾರಿರವರು ನನ್ನನ್ನು ಪಂಚನೆಂದು ಠಾಣೆಗೆ ಕರೆಸಿದ್ದರು. ನನ್ನ ಜೊತೆ ಚಾಸಾ 4 ಸಹ ಇದ್ದ. ಪೋಲೀಸ್ ಠಾಣೆಯಲ್ಲಿ ಆ ಸಮಯದಲ್ಲಿ 1 ನೇ ಆರೋಪಿಯು ಇದ್ದ. ಆತ ಠಾಣೆಯಲ್ಲಿ ಮುಂಜಾನೆ 9-00 ಗಂಟೆ ಸಮಯದಲ್ಲಿ ಒಂದು ಮೊಬೈಲ್‌ನ್ನು ಪೋಲೀಸರ ಮುಂದೆ ಹಾಜರುಪಡಿಸಿದ್ದನು. ನಾನು ಈಗ ನೋಡುತ್ತಿರುವ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-70 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-70(ಎ) ಎಂದು ಗುರುತಿಸಲಾಯಿತು. ಪೋಲೀಸರು ನಿಪಿ-70 ರಂತೆ ಪಂಚನಾಮೆಯನ್ನು ಮಾಡಿ ಮೊಬೈಲ್‌ನ್ನು ಜಪ್ತು ಮಾಡಿಕೊಂಡಿದ್ದರು. ಆ ದಿವಸ ಜಪ್ತು ಮಾಡಿಕೊಂಡ ಮೊಬೈಲ್‌ನ್ನು ನೋಡಿದರೆ ಗುರುತಿಸುತ್ತೇನೆ. ಮೊಬೈಲ್‌ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಇದ್ದ ಕಾರಣ ಅದನ್ನು ಗುರುತಿಸಿಲ್ಲ. ಮೊಬೈಲ್ ಜಪ್ತು ಸಮಯದಲ್ಲಿ ನಾನು ಈಗ ನೋಡುತ್ತಿರುವ ಪೋಟೋವನ್ನು ತೆಗೆಯಲಾಗಿತ್ತು. ಸದರಿ ಪೋಟೋವನ್ನು ನಿಪಿ-71 ಎಂದು ಗುರುತಿಸಲಾಯಿತು.

ನಂತರ 1 ನೇ ಆರೋಪಿ ನಮ್ಮನ್ನು ಬೆಳಗಲ್‌ಕ್ರಾಸ್ ಹತ್ತಿರ ಇರುವ ಮಸೀದಿ ಬಳಿ ಕರೆದುಕೊಂಡು ಹೋಗಿದ್ದ. ಸದರಿ ಸ್ಥಳದಲ್ಲಿ ಅಪಹರಣ ಆಗಿತ್ತು ಎಂದು 1 ನೇ ಆರೋಪಿ ತೋರಿಸಿದ್ದ. ಸದರಿ ಸ್ಥಳದಲ್ಲಿ ಪೋಲೀಸರು

ಪಂಚನಾಮೆ ಮಾಡಿದ್ದರು. ಸದರಿ ಪಂಚನಾಮೆಯನ್ನು ಮುಂಜಾನೆ 10-40 ಕ್ಕೆ ಮಾಡಿದ್ದರು. ಸದರಿ ಪಂಚನಾಮೆಯನ್ನು ನಿಪಿ-72 ಎಂದು ಹಾಗೂ ಸಾಕ್ಷಿಯ ಸಹಿಯುನ್ನು ನಿಪಿ-72(ಎ) ಎಂದು ಗುರುತಿಸಲಾಯಿತು. ಸದರಿ ಮಹಜರು ಸಮಯದಲ್ಲಿ ಪೋಟೋವನ್ನು ತೆಗೆಸಲಾಗಿತ್ತು. ಸಾಕ್ಷಿ ಗುರುತಿಸಿದ ಪೋಟೋವನ್ನು ನಿಪಿ-73 ಎಂದು ಗುರುತಿಸಲಾಯಿತು.

1 ಮತ್ತು 2 ನೇ ಆರೋಪಿತರು ನಮ್ಮನ್ನು ನಂತರ ಸಿರಿಗೇರಿ ಕ್ರಾಸ್ ಹತ್ತಿರ ಇರುವ ಕಾಲುವೆ ಬಳಿ ಕರೆದುಕೊಂಡು ಹೋಗಿದ್ದ. ಸದರಿ ಸ್ಥಳದಲ್ಲಿ ಕೊಲೆಯಾಗಿದ್ದ ಜಾಗೆಯ್ನು ಮತ್ತು ಊಟ ಮಾಡಿದ ಜಾಗೆಯನ್ನು 1 ಮತ್ತು 2 ನೇ ಆರೋಪಿತರು ತೋರಿಸಿದ್ದರು. ಸದರಿ ಸ್ಥಳದಲ್ಲಿ ಪೋಲೀಸರು ಪಂಚನಾಮೆಯನ್ನು ಮಾಡಿ ಆರೋಪಿ 1 ತೋರಿಸಿದ ಒಂದು ಆಟೋ ಕಿಕ್ ರಾಡನ್ನು ಜಪ್ತು ಮಾಡಿಕೊಂಡಿದ್ದರು. ಸದರಿ ಪಂಚನಾಮೆಯನ್ನು ನಿಪಿ-74 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹ ಪ್ರತಿ ಪುಟದಲ್ಲಿದ್ದು, ಕೊನೆಯ ಪುಟದಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-74(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಆಟೋ ಕಿಕ್ ರಾಡನ್ನು ಮು ಮಾ 1 ಎಂದು ಗುರುತಿಸಲಾಯಿತು. ಸದರಿ ಮಹಜರು ಸಮಯದಲ್ಲಿ ನಕಾಶೆಯನ್ನು ತಯಾರಿಸಲಾಗಿತ್ತು. ಸದರಿ ನಕಾಶೆಯನ್ನು ನಿಪಿ-75 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-75(ಎ) ಎಂದು ಗುರುತಿಸಲಾಯಿತು. ಸದರಿ ಮಹಜರು ಸಮಯದಲ್ಲಿ ಎರಡು ಪೋಟೋಗಳನ್ನು ತೆಗೆಯಲಾಗಿತ್ತು. ಸದರಿ ಎರಡು ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ-76 ಮತ್ತು 77 ಎಂದು ಗುರುತಿಸಲಾಯಿತು.

ನಂತರ 1 ಮತ್ತು 2 ನೇ ಆರೋಪಿತರು ನಮ್ಮನ್ನು ಟಿ ಬಿ ಸ್ಯಾನಿಟೋರಿಯಂ ಬಳಿ ಕರೆದುಕೊಂಡು ಹೋಗಿದ್ದರು. ಸದರಿ ಸ್ಥಳದಲ್ಲಿ ಆರೋಪಿತರು ತೋರಿಸಿದ ಒಂದು ಕಾರನ್ನು ಪೋಲೀಸರು ಪಂಚನಾಮೆ ಮಾಡಿ ಜಪ್ತು ಮಾಡಿಕೊಂಡಿದ್ದರು. ಸದರಿ ಪಂಚನಾಮೆ ಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-78 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-78(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋದಲ್ಲಿ ಜಪ್ತಾದ ಕಾರು ಕಾಣುತ್ತಿದೆ. ಸದರಿ ಪೋಟೋವನ್ನು ನಿಪಿ-79 ಎಂದು ಗುರುತಿಸಲಾಯಿತು. ಕಾಲುವೆ ಬಳಿ ವೀಡಿಯೋ ಸಹ ತೆಗೆದಿದ್ದರು. ಸಾಕ್ಷಿಗೆ ವೀಡಿಯೋವನ್ನು ನ್ಯಾಯಾಲಯದಲ್ಲಿ ಕಂಪ್ಯೂಟರ್

ನಲ್ಲಿ ಹಾಕಿ ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವೀಡಿಯೋದಲ್ಲಿ ಆರೋಪಿತರು ಕೆನಾಲ್ ಹತ್ತಿರ ಬರುತ್ತಿರುವುದು ಮಾತ್ರ ಕಾಣುತ್ತಿದೆ. ಸದರಿ ವೀಡಿಯೋ ಸಿಡಿಯನ್ನು ನಿಪಿ-80 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ 1 ಮತ್ತು 2 ನೇ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ನಾನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಎಫ್ ಡಿ ಎ ಎಂದು ಕೆಲಸ ಮಾಡುತ್ತಿದ್ದೆ. ನಮ್ಮ ಕಚೇರಿ ಮಹಿಳಾ ಪೋಲೀಸ್ ಠಾಣೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ಪೋಲೀಸರು ಪಂಚನಾಮೆಗೆ ಬರುವಂತೆ ಹೇಳಿ ನನಗೆ ವೈಯಕ್ತಿಕವಾಗಿ ನೋಟೀಸ್‌ನ್ನು ಕೊಟ್ಟಿಲ್ಲ, ಆದರೆ ನಮ್ಮ ಮೇಲಾಧಿಕಾರಿಗಳಿಗೆ ಮನವಿ ಪತ್ರವನ್ನು ಕೊಟ್ಟಿದ್ದರು. ನನಗೆ ಪ್ರಕರಣದ ಬಗ್ಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಮತ್ತು ನಾನು ಪೋಲೀಸರು ಕರೆದುಕೊಂಡು ಹೋಗಿದ್ದ ಜಾಗೆಗಳಿಗೆ ಹೋಗಿದ್ದೆ ಎಂದರೆ ಸರಿ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲೀಸರಿಗೆ ಸಹಾಯ ಮಾಡುವ ಸಲುವಾಗಿ ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ 3 ಮತ್ತು 4 ನೇ ಪರ ವಕೀಲರು ಸಾಕ್ಷಿ ಮೇಲಿನ ಪಾಟೀ ಸವಾಲನ್ನು ಅವಲಂಬಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**